File No. MED/545/MPS/2022-US2-MEDICAL EDUCATION SEC (Computer No. 959320)

ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 800 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 26.12.2022 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಗಳಲ್ಲಿ ಅತ್ಯಂತ ಕಡಿಮೆ ಸಂಖ್ಯೆಯ ಖಾಯಂ ತಾಂತ್ರಿಕ ಸಿಬ್ಬಂದಿಯನ್ನು ಹೊಂದಿರುವ ಇ.ಇ.ಜಿ. ತಂತ್ರಜ್ಞರು, ಎಕೋ ತಂತ್ರಜ್ಞರು ಮತ್ತು ಸರ್ಜಿಕಲ್ ಗ್ಯಾಸ್ಟ್ರೋ ಎಂಟಾರಾಲಜಿ ತಂತ್ರಜ್ಞರು ಹಾಗೂ ನರ್ಸ್‌ಗಳ ವೃಂದ ಮತ್ತು ನೇಮಕಾತಿ (ಸಿ ಅಂಡ್ ಆರ್) ನಿಯಮ ರೂಪಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಬಂದಿದೆ |
| ಆ) | ಬಂದಿದ್ದಲ್ಲಿ, ಈ ತಂತ್ರಜ್ಞರ ಹುದ್ದೆಗಳನ್ನು ಯಾವಾಗ ಖಾಯಂಗೊಳಿಸಲಾಯಿತು ಇಲ್ಲಿಯವರೆಗೆ ವೃಂದ ಮತ್ತು ನೇಮಕಾತಿ ನಿಯಮ ರೂಪಿಸಿರುವುದಿಲ್ಲದಿರುವುದಕ್ಕೆ ಕಾರಣಗಳೇನು; (ವಿವರ ನೀಡುವುದು) | ಸಂಸ್ಥೆಯ ಬೈಲಾಗಳಲ್ಲಿ ತಂತ್ರಜ್ಞರ ಹುದ್ದೆಗಳನ್ನು ಭರ್ತಿ ಮಾಡಲು ಮಾನದಂಡಗಳನ್ನು ನಿಗದಿಪಡಿಸಿರುವಂತೆ ನೇಮಕಾತಿ ಕ್ರಮವನ್ನು ಕೈಗೊಳ್ಳಲಾಗಿದೆ. ವಿವಿಧ ಸ್ವಾಯತ್ತ ಸಂಸ್ಥೆಗಳಲ್ಲಿ ಏಕರೂಪದ ಮಾನದಂಡಗಳು ಇಲ್ಲದಿರುವುದನ್ನು ಮನಗಂಡು, ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಎಲ್ಲಾ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳ ಗ್ರೂಪ್-ಬಿ, ಸಿ ಮತ್ತು ಡಿ ವೃಂದದ ಹುದ್ದೆಗಳಿಗೆ ಏಕರೂಪದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲು ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಕಾರ್ಯಗತಗೊಂಡಿರುತ್ತದೆ. |
| ಇ) | ಈ ತಂತ್ರಜ್ಞರ ಹುದ್ದೆಗಳಿಗೆ ಪದೋನ್ನತಿ ಮತ್ತು ಬಡ್ತಿ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು; ಏಕೆ ಸರ್ಕಾರ ಈ ವಿಳಂಬ ನೀತಿ ಅನುಸರಿಸುತ್ತಿದೆ; (ವಿವರ ನೀಡುವುದು) | ವೃಂದ ಮತ್ತು ನೇಮಕಾತಿ ನಿಯಮಗಳು ಅಂತಿಮಗೊಂಡ ನಂತರದಲ್ಲಿ ಹಾಗೂ ಸರ್ಕಾರವು ಮೀಸಲಾತಿ ಸಂಬಂಧ ನೀಡಬಹುದಾದ ಮಾರ್ಗಸೂಚಿಗಳ ನಂತರ ಬಡ್ತಿ ಕ್ರಮಕ್ಕೆ ಚಿಂತನೆ ನಡೆಸಲಾಗುವುದು. |
| ಈ) | ಇಂತಹ ತಂತ್ರಜ್ಞರ ಹುದ್ದೆಗಳು ತುಂಬಾ ಕಡಿಮೆ ಇದ್ದು, ಈ ಹುದ್ದೆಗಳ ತಂತ್ರಜ್ಞರು ವೈದ್ಯರಿಗಿಂತಲೂ ಪ್ರಮುಖವಾಗಿ ಆಸ್ಪತ್ರೆಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗಿರುವುದರಿಂದ ಇವರಿಗೆ ಸರ್ಕಾರ ಬಡ್ತಿ ನೀಡದಿರಲು ಕಾರಣವೇನು; (ಸಂಪೂರ್ಣ ವಿವರ ನೀಡುವುದು) | |
| ಉ) | ಸದರಿ ಹುದ್ದೆಗಳಲ್ಲಿರುವ ತಂತ್ರಜ್ಞರಿಗೆ ಕಾಲಮಿತಿಯೊಳಗೆ ಪದೋನ್ನತಿ ನೀಡಲು ಕೈಗೊಳ್ಳುವ ಕ್ರಮಗಳೇನು; ಸರ್ಕಾರ ಈ ಬಗ್ಗೆ ಆದೇಶ ಹೊರಡಿಸುವುದೇ; (ಉತ್ತರ ನೀಡುವುದು) | |
| ಊ) | ವೈದ್ಯಕೀಯ ಸಂಸ್ಥೆಗಳಲ್ಲಿ 2006 ರಿಂದಲೇ ಖಾಯಂ ಆಗಿ ನೇಮಕಾತಿ ಹೊಂದಿ ಈ ಹುದ್ದೆಗಳಲ್ಲಿರುವ ತಂತ್ರಜ್ಞರಿಗೆ ಕೆ.ಜಿ.ಐ.ಡಿ ಸೌಲಭ್ಯವನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವೈದ್ಯಕೀಯ ಮಹಾವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿರುತ್ತವೆ. ಈ ಸ್ವಾಯತ್ತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು "ಸರ್ಕಾರಿ ನೌಕರ" ಎಂಬ ಪದದ ವ್ಯಾಪ್ತಿಯಡಿ ಒಳಪಡುವುದಿಲ್ಲ. ಆದ್ದರಿಂದ ಕೆ.ಜಿ.ಐ.ಡಿ ಸೌಲಭ್ಯವನ್ನು ವಿಸ್ತರಿಸಿರುವುದಿಲ್ಲ. |
| ಋ) | ಬಂದಿದ್ದಲ್ಲಿ, ಈ ಸೌಲಭ್ಯವನ್ನು ಸದರಿ ತಂತ್ರಜ್ಞರಿಗೆ ನೀಡದಿರಲು ಕಾರಣವೇನು; ಮತ್ತು ಯಾವ ಕಾಲಮಿತಿಯೊಳಗಾಗಿ ಈ ಸೌಲಭ್ಯವನ್ನು ನೀಡಲು ಸರ್ಕಾರ ಆದೇಶ ಹೊರಡಿಸುವುದೇ? (ವಿವರ ನೀಡುವುದು) | |

(ಡಾ. ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು



Generated from eOffice by DR K SUDHAKAR MED-MIN(SK) MINISTER MEDICAL EDUCATION SEC on 16/12/2022 06:30 PM